# ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 16-08-2022

**ಬೀದರ ನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 43/2022 ಕಲಂ 279, 304(ಎ) ಐಪಿಸಿ :-**

ದಿನಾಂಕ 15/08/2022 ರಂದು 10:00 ಗಂಟೆಗೆ ಫಿರ್ಯಾದಿ ಶ್ರೀ ಎಂ.ಡಿ ಸಲೀಮ ತಂದೆ ಎಂ.ಡಿ ಜಮಾಲ ಸಾಬ ವಯ:68 ವರ್ಷ ಜಾ:ಮುಸ್ಲಿಂ ಉ: ಸೈಕಲ್ ವ್ಯಾಪಾರ ಸಾ:ಮನೆ ನಂ 5-2-14 ಬಾರೂದ ಗಲ್ಲಿ ಬೀದರ ರವರು ಠಾಣೆಗೆ ಮೌಖಿಕ ಹೇಳಿಕೆ ನೀಡಿದರ ಸಾರಾಂಶವೇನೆಂದರೆ ಇವರಿಗೆ 3 ಜನ ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣು ಮಗಳಿದ್ದು 1) ಆಯೇಶಾ ವಯ:38 ವರ್ಷ 2) ಮೊಹ್ಮದ ಬಿಲಾಲ್ ವಯ:36 ವರ್ಷ 3) ಮೊಹ್ಮದ ಫಾರೂಖ ವಯ:34 ವರ್ಷ 4) ಮೃತ ಎಂ.ಡಿ ಉಬೈದ ವಯ:30 ವರ್ಷ ಈ ರೀತ ಇದ್ದು ಮೃತ ಎಂ.ಡಿ ಉಬೈದ ಇತನ ಮದುವೆ ಮಾಡಿದ್ದು ಅವನ ಹೆಂಡತಿ ಸಾದಿಯಾ ತಬಸುಮ್ ರವರು ಖಾಸಗಿ ಶಿಕ್ಷಕಿ ಅಂತ ಸದಾಶಿವಪೇಟದಲ್ಲಿ ಕೆಲಸ ಮಾಡಿಕೊಂಡು ಇರುತ್ತಾನೆ ಇವರಿಗೆ ಒಬ್ಬ ತಬಸುಮ ಪರತ ಎಂಬ ಹೆಸರಿನ 2 ವರ್ಷದ ಮಗಳಿರುತ್ತಾಳೆ.  ಮಗ ಎಂ.ಡಿ ಉಬೈದ ಇವನು ಸದಾಶಿವ ಪೇಟದಲ್ಲಿ ಹೆಂಡತಿ ಮಕ್ಕಳೊಂದಿಗೆ ಬಾಡಿಗೆ ಮನೆಯಲ್ಲಿ ವಾಸವಾಗಿರುತ್ತಾರೆ. ಹಿಗಿದ್ದು ದಿನಾಂಕ 14/08/2022 ರಂದು ಸಾಯಂಕಾಲ 5:00 ಗಂಟೆ ಸುಮಾರಿಗೆ  ವನು ಸದಾಶಿವಪೇಟದಿಂದ ಬೀದರಕ್ಕೆ ಮನೆಗೆ ಬಂದು  ಸ್ಕೋಟಿ ನಂ ಕೆಎ-38/ಕೆ-702 ನೇದ್ದರ ಮೇಲೆ ಕುಳಿತು ಹೊರಗಡೆ ಹೋಗಿ ಬರುತ್ತೇನೆ ಅಂತ ಮನೆಯಲ್ಲಿ ಹೇಳಿ ರಾತ್ರಿ 8:30 ಪಿ.ಎಂ ಗಂಟೆ ಸುಮಾರಿಗೆ ಮನೆಯಿಂದ ಹೋದರು ನಂತರ ಮರಳಿ ಮನೆಗೆ ತಡರಾತ್ರಿ ವರೆಗೆ ಬಾರದಿದ್ದಾಗ ಎಲ್ಲಾ ಕಡೆಗಳಲ್ಲಿ ಹುಡುಕಾಡಿದರೂ ಎಲ್ಲಿಯೋ ಪತ್ತೆ ಆಗಿರುವುದ್ದಿಲ್ಲಾ,   ವಾಲ್ದೋಡಿ-ಅಗ್ರಹಾರ ಮಧ್ಯ ರೋಡಿನ ಎಡ ಬದಿಯಲ್ಲಿ ಅಂದರೆ ಪೂರ್ವ ದಿಕ್ಕಿನಲ್ಲಿ ರೋಡಿನ ಬದಿಯಲ್ಲಿ ಸ್ಕೋಟಿ ಬಿದ್ದಿದ್ದು ಮತ್ತು ಮಗನಿಗೆ ನೋಡಲು ರೋಡಿನ ಬ್ರಾಸಿನಲ್ಲಿ ನೀರಿನಲ್ಲಿ ಬಿದ್ದಿದ್ದು ಹತ್ತಿರ ಹೋಗಿ ನೋಡಲು ಮೃತ ಪಟ್ಟಿದ್ದು ಕಂಡಿರುತ್ತೇನೆ. ನನ್ನ ಮಗ ತನ್ನ ಸ್ಕೋಟಿಯನ್ನು ಅತೀ ವೇಗ ಹಾಗೂ ನಿಷ್ಕಾಳಜಿತನದಿಂದ ಓಡಿಸಿಕೊಂಡು ಹೋಗಿ ಒಮ್ಮೆಲ್ಲೆ ಬ್ರೇಕ್ ಹಾಕಿದರಿಂದ ಹಿಡಿತ ತಪ್ಪಿ ರೋಡಿನ ಮೇಲೆ ಬಿದ್ದು ಪಲ್ಟಿ ಆಗುತ್ತಾ ರೋಡಿನ ಬ್ರಾಸಿನಲ್ಲಿ ಹೋಗಿ ನೀರಿನಲ್ಲಿ ಬಿದ್ದು ಭಾರಿ ಒಳಗಾಯವಾಗಿ ಮೃತಪಟ್ಟಿರುತ್ತಾರೆ. ಸದರಿ ಘಟನೆ ನಿನ್ನೆ ದಿನಾಂಕ 14/08/2022 ರಂದು 8:30 ಗಂಟೆಯಿಂದ ದಿನಾಂಕ 15/08/2022 ರಂದು 06:30 ಗಂಟೆ ಅವಧಿಯಲ್ಲಿ ಜರುಗಿರಬಹುದು. ಅಂತಾ ನೀಡಿದ ದೂರಿನ ಮೇರೆಗ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

**ಮಾರ್ಕೆಟ ಪೊಲೀಸ ಠಾಣೆ ಅಪರಾಧ ಸಂಖ್ಯೆ 53/ 2022 ಕಲಂ 279, 304(ಎ) ಐಪಿಸಿ ಜೊತೆ 187 ಐಎಮ್‌ವ್ಹಿ ಎಕ್ಟ :-**

ದಿನಾಂಕ 15-08-2022 ರಂದು 0815 ಗಂಟೆಗೆ ಫಿರ್ಯಾದಿ ಶ್ರೀಮತಿ ರುದಯರಂಜನಿ ಗಂಡ ರಾಜಕುಮಾರ ಅಭ್ಯಂಧಿ ವಯ 35 ವರ್ಷ ಜಾತಿ ಎಸ್.ಸಿ ಮಾದಿಗ ಉ;ಕೂಲಿ ಕೆಲಸ ಸಾ:ವಡ್ಡಿ ಗ್ರಾಮ ತಾ:ಜಹಿರಾಬಾದ ಜಿ;ಸಂಗಾರೆಡ್ಡಿ (ಟಿ.ಎಸ್) ರವರು ಠಾಣೆಗೆ ಬಂದು ದೂರು ನೀಡಿದರ ಸಾರಾಂಶವೇನೆಂದರೆ  ಇವರ ಮದುವೆಯು ಸುಮಾರು 20 ವರ್ಷಗಳ ಹಿಂದೆ ರಾಜಕುಮಾರ ತಂದೆ ತಿಪ್ಪಣ್ಣಾ ಅಭ್ಯಂಧಿ ವಯ 40 ವರ್ಷ ಸಾ:ವಡ್ಡಿ ಗ್ರಾಮ ಇವರ ಜೊತೆ ಆಗಿದ್ದು  ಗಂಡ ಕೂಲಿ ಕೆಲಸ ಮಾಡಿಕೊಂಡು ಇರುತ್ತಾರೆ. ಇವರಿಗೆ 1) ಸಂತೋಷ ವಯ 14 ವರ್ಷ 2) ಪ್ರಶಾಂತ ವಯ 10 ವರ್ಷ ಇಬ್ಬರು ಗಂಡು ಮಕ್ಕಳು ಇರುತ್ತಾರೆ.  ಗಂಡ ರಾಜಕುಮಾರ ರವರು ಕೂಲಿ ಕೆಲಸಕ್ಕೆಂದು ಬೇರೆ ಗ್ರಾಮಕ್ಕೆ ಹೋಗಿ 8-10 ದಿವಸಗಳು ಉಳಿದು ಕೂಲಿ ಕೆಲಸ ಮಾಡಿ ಮರಳಿ ಮನೆಗೆ ಬರುತ್ತಿದ್ದರು. ಹೀಗಿರುವಾಗ ೕನ ದಿನಾಂಕ 14-08-2022 ರಂದು ಸಾಯಂಕಾಲ 1800 ಗಂಟೆಯ ಸುಮಾರಿಗೆ  ಗಂಡ ರಾಜಕುಮಾರ ರವರು ಮನೆಯಿಂದ ಬ್ಯಾಗನಲ್ಲಿ ಬಟ್ಟೆ ಇಟ್ಟುಕೊಂಡು ಕೂಲಿ ಕೆಲಸಕ್ಕೆ ಬೇರೆ ಗ್ರಾಮಕ್ಕೆ ಹೋಗುತ್ತೇನೆಂದು ಹೇಳಿ ಮನೆಯಿಂದ ಹೋಗಿರುತ್ತಾರೆ. ದಿನಾಂಕ 14-08-2022 ರಂದು ರಾತ್ರಿ 2200 ಗಂಟೆಯ ಸುಮಾರಿಗೆ  ಫೀರ್ಯಾದಿಯು ಮನೆಯಲ್ಲಿದ್ದಾಗ  ಗೊತ್ತಾಗಿದೆನಂದರೆ,  ಗಂಡ ರಾಜಕುಮಾರ ರವರು ಬೀದರ ಜಹಿರಾಬಾದ ರೋಡ ದೇವ ದೇವ ವನದ ಕಡೆಯಿಂದ ನಡೆದುಕೊಂಡು ಬೀದರ ಕಡೆಗೆ ಹೋಗುವಾಗ  ದಿನಾಂಕ 14-08-2022 ರಂದು ರಾತ್ರಿ 1900 ಗಂಟೆಯಿಂದ 2000 ಗಂಟೆಯ ಅವಧಿಯಲ್ಲಿ ಅಪರಿಚಿತ ವಾಹನದ ಚಾಲಕನು ತನ್ನ ವಾಹವನ್ನು ಅತಿವೇಗ ಹಾಗು ನಿಷ್ಕಾಳಜೀತನ ದಿಂದ ಚಲಾಯಿಸಿಕೊಂಡು ಬಂದು  ಡಿಕ್ಕಿ ಮಾಡಿದರಿಂದ ತಲೆಯ ಮೆದುಳ ಹೊರಗೆ ಬಂದು ಭಾರಿ ರಕ್ತಗಾಯ, ಬಲಕೈ ಮುರಿದು ಭಾರಿ ರಕ್ತಗಾಯವಾಗಿ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

**ಮನ್ನಳಿ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 40/2022 ಕಲಂ 279, 337, 338, 304(ಎ) ಐಪಿಸಿ :-**

ದಿನಾಂಕ 15.08.2022 ರಂದು 1730 ಗಂಟೆಯ ಸುಮಾರಿಗೆ  ಎಮ್.ಎಲ್.ಸಿ ಮಾಹಿತಿ ಬಂದ ಮೇರೆಗೆ ಬೀದರ ಸರಕಾರಿ ಆಸ್ಪತ್ರೆಗೆ ಬೇಟಿ ನೀಡಿ ಗಾಯಾಳು ಹತ್ತಿರ ಹಾಜರಿದ್ದ ಫಿರ್ಯಾಧಿ ಸುನೀತಾ ಗಂಡ ರವಿ ಉಕಂಡಾ ಸಾ|| ಲಕ್ಷ್ಮಿ ನಗರ ಬೋರಾಬಂಡಾ ಹೈದ್ರಾಬಾದ ಇವರ ಹೇಳಿಕೆ ಪಡೆದುಕೊಂಡಿದ್ದು ಸದರಿ ಹೇಳಿಕೆಯ ಸಾರಾಂಶವೆನೆಂದರೆ  ಇವರ ತಾಯಿ ಸರಳ ಗಂಡ ದಿ ಉಪ್ಪಾಲಯ್ಯಾ ವಯ: 59 ವರ್ಷ, ಸಾ|| ಬೇಗಂ ಪೇಟ ಹಾಗೂ  ಇವರ □□□□ ರಜೀತಾ ಗಂಡ ದಿ ದೇವಿಂದ್ರ ಕಂಪ್ಪಾರ ಸಾ|| ಬೇಗಂಪೇಟ, ನಮ್ಮ ಇನ್ನೊಬ್ಬ ಅಕ್ಕ ಸರೀತಾ ಗಂಡ ಮಹಿಪಾಲ ಅಕುಲಾ, ಸಾ|| ಬೋರಾಬಂಡಾ ಹೈದ್ರಾಬಾದ ಇವಳ ಮಕ್ಕಳಾದ ಶಾಲಿನಿ ವಯ: 19 ವರ್ಷ, ಪ್ರಿಯಂಕಾ ವಯ: 16 ವರ್ಷ, ಸರೀತಾ ಇವಳ ಭಾವನ ಮಗನಾದ ದೀನೇಶ ತಂದೆ ನರಸಿಂಹಲು ಅಕುಲಾ ವಯ: 25 ವರ್ಷ, ಸಾ|| ಬೋರಾಬಂಡಾ ಹೈದ್ರಾಬಾದ ಹಾಗೂ  ಇವರ  ಅಕ್ಕಳಾದ ಅನೀತಾ ಗಂಡ ಗಿರಿದರ ಗೋಗಿ ಸಾ|| ಬೇಗಂಪೇಟ ಮತ್ತು ಇವಳ ಗಂಡ ಗಿರಿಧರ ತಂದೆ ಸುಧರ್ಶನ ಗೋಗಿ, ವಯ: 45 ವರ್ಷ, ಹಾಗೂ ಇವಳ ಮಕ್ಕಳಾದ ಹರ್ಷವರ್ದನ ವಯ: 12 ವರ್ಷ, ಮಯಾಂಕ ವಯ: 2 ವರ್ಷ ಎಲ್ಲರೂ ಕೂಡಿ ದಿನಾಂಕ 15.08.2022 ರಂದು ಅಂದಾಜು ಮಧ್ಯಾಹ್ನ 12 ಗಂಟೆಯ ಸುಮಾರಿಗೆ ಹೈದ್ರಾಬಾದದಿಂದ ಘಾಣಗಾಪೂರ ದೇವಸ್ಥಾನಕ್ಕೆ

ಹೋಗಲು ಯಾರ್ಟಿಗ ಕಾರ ನಂ ಎಪಿ-29ಸಿ-5788 ನೇದರಲ್ಲಿ ಹೋಗುವಾಗ ಮಧ್ಯಾಹ್ನ 3:40 ಗಂಟೆಯ ಸುಮಾರಿಗೆ ಹೈದ್ರಾಬಾದ- ಮುಂಬೈ ಹೈವೇ ರೋಡಿನ ಮೇಲೆ ಭಂಗೂರ ಓವರ್ ಬ್ರಿಡ್ಜ ಮೇಲೆ ಕಾರ ಚಾಲಕ ದಿನೇಶ ಇತನು ಹೈದ್ರಾಬಾದ ಕಡೆಯಿಂದ ತನ್ನ ಕಾರ ಅತೀ ವೇಗ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ಮುಂದೆ ಹೋಗುತ್ತಿದ್ದ ಕಂಟೈನರ ವಾಹನ ನಂ ಹೆಚ್.ಆರ್.38-ವಿ-9311 ನೇದಕ್ಕೆ ಡಿಕ್ಕಿ ಮಾಡಿದ್ದರಿಂದ ಕಾರ್ ನಲ್ಲಿದ್ದ ಗಿರಿಧರ ತಾಯಿ ಅನೀತಾ ಮಯಾಂಕಾ, ದಿನೇಶ ಮತ್ತು ಪ್ರಿಯಾಂಕಾ ಮೃತಪಟ್ಟಿದ್ದು, ಉಳಿದವರಿಗೆ ಗಾಯಗಳಾಗಿರುತ್ತವೆ. ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.